# ಯಕ್ಷಗಾನ ಮತ್ತು ಕನ್ನಡ ರಂಗಭೂಮಿ ಸಂಬಂಧ

**ಶರಣಮ್ಮ***

**DOI: https://doi.org/10.5281/zenodo.22108405**

**ABSTRACT**

ಕರ್ನಾಟಕದ ಸಾಂಸ್ಕೃತಿಕ ಹೆಮ್ಮೆಯಾದ ಯಕ್ಷಗಾನವು ಆಧುನಿಕ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಭದ್ರ ಬುನಾದಿಯಾಗಿದೆ. ನೃತ್ಯ, ಸಂಗೀತ, ವಿಶಿಷ್ಟ ವೇಷಭೂಷಣ ಮತ್ತು ಅರ್ಥಪೂರ್ಣ ಸಂಭಾಷಣೆಗಳ ಅಪರೂಪದ ಸಂಗಮವಾಗಿರುವ ಈ ದೇಸಿ ಕಲೆಯು, ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ವಿಶಿಷ್ಟವಾಗಿ ಬೆಳೆದಿದೆ. ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂಬ ಎರಡು ಪ್ರಮುಖ ಶೈಲಿಗಳನ್ನು ಹೊಂದಿರುವ ಯಕ್ಷಗಾನವು, ಪೌರಾಣಿಕ ಕಥೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಡಾ. ಶಿವರಾಮ ಕಾರಂತ ಮತ್ತು ಡಾ. ಚಂದ್ರಶೇಖರ ಕಂಬಾರರಂತಹ ದಿಗ್ಗಜರು ಈ ಸಾಂಪ್ರದಾಯಿಕ ಕಲೆಗೆ ಆಧುನಿಕ ರಂಗಭೂಮಿಯ ಸ್ಪರ್ಶ ನೀಡುವ ಮೂಲಕ ಹೊಸ ಆಯಾಮ ಒದಗಿಸಿದ್ದಾರೆ. ರಾತ್ರಿಯಿಡೀ ನಡೆಯುತ್ತಿದ್ದ ಬಯಲಾಟಗಳು ಇಂದು ಕಾಲಘಟ್ಟಕ್ಕೆ ತಕ್ಕಂತೆ ಸಂಕ್ಷಿಪ್ತಗೊಂಡು ಆಧುನಿಕ ರಂಗಮಂದಿರಗಳಿಗೂ ವಿಸ್ತಾರಗೊಂಡಿದ್ದು, ಜನಪದ ಕಲೆ ಮತ್ತು ಕನ್ನಡ ರಂಗಭೂಮಿಯ ನಡುವಿನ ಅವಿನಾಭಾವ ಸಂಬಂಧವನ್ನು ಸಾಬೀತುಪಡಿಸುತ್ತವೆ.

**KEYWORDS:** ಯಕ್ಷಗಾನ, ಕನ್ನಡ ರಂಗಭೂಮಿ, ಬಯಲಾಟ, ತೆಂಕುತಿಟ್ಟು ಮತ್ತು ಬಡಗುತಿಟ್ಟು, ಸಾಂಸ್ಕೃತಿಕ ಪರಂಪರೆ.

* **ಶರಣಮ್ಮ,** ಸಂಶೋಧನಾರ್ಥಿ, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಕರ್ನಾಟಕದಲ್ಲಿ ಯಕ್ಷಗಾನವು ಪ್ರಮುಖ ಸ್ಥಾನವನ್ನು ಹೊಂದಿದೆ. ಇದು ಕನ್ನಡ ರಂಗಭೂಮಿಯೊಂದಿಗೆ ಐತಿಹಾಸಿಕ ಸಂಬಂಧವನ್ನು ಹೊಂದಿದೆ. ಯಕ್ಷಗಾನವು ನಾಟಕ, ಸಂಗೀತ, ನೃತ್ಯ, ಮಾತುಗಾರಿಕೆ ಹಾಗೂ ವಿಶಿಷ್ಟ ವೇಷಭೂಷಣಗಳೊಂದಿಗೆ ವಿಜೃಂಭಿಸುತ್ತದೆ. ಯಕ್ಷಗಾನವು ನೃತ್ಯ, ಸಂಗೀತ, ಮಾತುಗಾರಿಕೆಯೊಂದಿಗೆ ಅಭಿನಯಗಳನ್ನೊಳಗೊಂಡ ಪ್ರಾಚೀನ ಬಯಲಾಟವಾಗಿದೆ. ಯಕ್ಷಗಾನವು ಆಧುನಿಕ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಭದ್ರಬುನಾದಿಯಾಗಿದೆ. ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ನಡುವೆ ಗಾಢವಾದಂತಹ ಐತಿಹಾಸಿಕ ಸಂಬಂಧ ಹೊಂದಿದೆ.

ಯಕ್ಷಗಾನವು ಬಯಲಾಟದ ರೂಪದಲ್ಲಿ ಜನಪದ ರಂಗಭೂಮಿಯನ್ನು ಬೆಳೆಸಿ ಆಧುನಿಕ ಕನ್ನಡ ನಾಟಕಗಳಿಗೆ ಪ್ರಮುಖ ಸ್ಫೂರ್ತಿಯಾಗಿದೆ. ಹಾಗೆ ದೇಸಿ ರಂಗರೂಪದ ಬೇರುಗಳನ್ನು ಒದಗಿಸುವಂತಹದ್ದಾಗಿದೆ. ಕರ್ನಾಟಕದ ಯಕ್ಷಗಾನವು ಸಾಂಪ್ರದಾಯಿಕ ದೇಸಿ ರಂಗಭೂಮಿ. ಇದು ರಂಗಭೂಮಿಯ ಇತರ ಪ್ರಕಾರಗಳಿಗಿಂತ ಭಿನ್ನವಾಗಿ ಯಕ್ಷಗಾನವು ತನ್ನದೇ ಆದ ವರ್ಣರಂಜಿತವಾದ ಉಡುಪುಗಳು, ಕಿರೀಟಗಳು ಮತ್ತು ಮುಖವರ್ಣಿಕೆಯನ್ನು ಹೊಂದಿದೆ. ರಂಗಭೂಮಿಯ ನಾಟಕದಂತೆ ಯಕ್ಷಗಾನದಲ್ಲಿ ನಿರ್ದಿಷ್ಟವಾದಂತಹ ಪೌರಾಣಿಕ ಕಥೆಗಳನ್ನು ಪದ್ಯ ಮತ್ತು ಸಂಭಾಷಣೆಯ ಮೂಲಕ ಪ್ರಸ್ತುತ ಪಡಿಸುವುದರೊಂದಿಗೆ ಕನ್ನಡ ರಂಗ ಸಾಹಿತ್ಯಕ್ಕೆ ಅಡಿಪಾಯವಾಗಿದೆ. ಹಾಗೆಯೇ ಈ ಒಂದು ಯಕ್ಷಗಾನವು ಕರ್ನಾಟಕದ ಮಣ್ಣಿನ ದೇಸಿ ರಂಗಕಲೆಯಾಗುವದರೊಂದಿಗೆ ಕನ್ನಡ ಭಾಷೆಯ ಪ್ರಸಂಗದ ಸಾಹಿತ್ಯವನ್ನು ರಂಗದ ಮೇಲೆ ಜೀವಂತಗೊಳಿಸಿರುವುದು ಕನ್ನಡ ರಂಗಭೂಮಿಯಲ್ಲಿ ನೋಡುತ್ತೇವೆ. ಯಕ್ಷಗಾನದಲ್ಲಿ ವೇಷಭೂಷಣ, ಮುಖವರ್ಣನೆ, ಚಂಡೆಮದ್ದಳೆ, ತಾಳ ಹಾಗೂ ಆರ್ಭಟಿ ವೃತ್ತಿಯ ಪಾತ್ರಧಾರಿಗಳ ಮಾತುಗಾರಿಕೆಯ ಶೈಲಿಯು ಆಧುನಿಕ ರಂಗ ಪ್ರಯೋಗಗಳ ಮೇಲೆ ಪ್ರಭಾವ ಬೀರಿವೆ.

ಯಕ್ಷಗಾನವು ಕರ್ನಾಟಕದ ಕರಾವಳಿ ಭಾಗದಲ್ಲಿ ಹುಟ್ಟಿದ ಪ್ರಸಿದ್ಧ ಬಯಲಾಟ ಮತ್ತು ರಂಗಕಲೆಯಾಗಿ ಮಹತ್ವ ಪಡೆದಿದೆ. ಇದು ಸಂಗೀತ, ಸಾಹಿತ್ಯ, ನೃತ್ಯ ಮತ್ತು ಸುಂದರ ವೇಷಭೂಷಣಗಳನ್ನು ಹೊಂದಿರುವಂತಹ ಸಂಪ್ರದಾಯದ ರಂಗಭೂಮಿ. ಯಕ್ಷಗಾನವು 11ನೇ ಶತಮಾನದಿಂದ 16ನೇ ಶತಮಾನದ ನಡುವೆ ಹುಟ್ಟಿಕೊಂಡಿತು. 16ನೇ ಶತಮಾನದ ಕೊನೆಯಲ್ಲಿ ಪಾರ್ತಿಸುಬ್ಬನು ಯಕ್ಷಗಾನದ ಹಾಡು ಹಾಗೂ ಪ್ರಸಂಗಗಳನ್ನು ರಚಿಸಿ ಬೆಳೆಸಿದನು. ಯಕ್ಷಗಾನದ ಮುಖಾಂತರ ರಾಮಾಯಣ, ಮಹಾಭಾರತ ಹಾಗೂ ಪುರಾಣ ಕಥೆಗಳನ್ನು ಜನಸಾಮಾನ್ಯರಿಗೆ ತಿಳಿಸಲಾಯಿತು. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಕಾಸರಗೋಡು ಭಾಗಗಳಲ್ಲಿ ಇದು ದೊಡ್ಡ ಮಟ್ಟದಲ್ಲಿ ಬೆಳೆಯಿತು.

ಯಕ್ಷಗಾನವನ್ನು ವಿವಿಧ ಶೈಲಿಗಳಲ್ಲಿ ನೋಡುತ್ತೇವೆ. ಪ್ರಮುಖವಾಗಿ ಇದು 'ತೆಂಕುತಿಟ್ಟು' ಮತ್ತು 'ಬಡಗುತಿಟ್ಟು' ಎಂದು ಎರಡು ವಿಧಗಳಾಗಿ ವಿಂಗಡಿಸಲಾಗಿದೆ. 'ತೆಂಕುತಿಟ್ಟು', ದಕ್ಷಿಣ ಭಾಗದಲ್ಲಿ ಕಂಡುಬಂದರೆ (ಬೆಳೆದರೆ) 'ಬಡಗುತಿಟ್ಟು' ಉತ್ತರ ಭಾಗದಲ್ಲಿ ಕಂಡುಬರುತ್ತದೆ. ತೆಂಕುತಿಟ್ಟು ಮಂಗಳೂರಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಕಂಪನಿ ನಾಟಕಗಳಲ್ಲಿ ಕಂಡುಬರುತ್ತದೆ. ಯಕ್ಷಗಾನದಲ್ಲಿ ದಕ್ಷಿಣಾದಿ ಸಂಗೀತ ಪ್ರಭಾವವಿದೆ. ಕನ್ನಡ ರಂಗಭೂಮಿ ಪಾರ್ಸಿ ರಂಗಭೂಮಿಯ ನಾಟಕಗಳೊಂದಿಗೆ ಅನೇಕ ನಾಟಕಗಳು ಹುಟ್ಟಿಕೊಂಡವು. ವೃತ್ತಿಪರ ಹಾಗೂ ಹವ್ಯಾಸಿ ಮೇಳಗಳು (ಯಕ್ಷಗಾನ ತಂಡಗಳು) ರಾತ್ರಿಯಿಡೀ ತಿರುಗಾಟ ನಡೆಸಿ ಕರಾವಳಿಯ ಮನೆ ಮನೆಗೆ ಕಲೆಯನ್ನು ತಲುಪಿಸಿದವು. ದೇವಾಲಯಗಳ ಆವರಣದಲ್ಲಿ ಮತ್ತು ಬಯಲುಗಳಲ್ಲಿ ಆರಾಧನಾ ರೂಪವಾಗಿ

ಆರಂಭವಾಯಿತು. ಇದು ತಾಳಮದ್ದಳೆ, ಚಂಡೆ ವಾದ್ಯಗಳ ಹಿಮ್ಮೇಳ ಮತ್ತು ಅರ್ಥಪೂರ್ಣ ಮುಮ್ಮೇಳವನ್ನು ಹೊಂದಿದೆ. ಭಾಗವತರ ಹಾಡುಗಾರಿಕೆ ಮತ್ತು ಕಲಾವಿದರ ಹೆಜ್ಜೆಗಾರಿಕೆ ವಿಶೇಷವಾಗಿರುತ್ತದೆ. "ಯಕ್ಷಗಾನವೆಂಬುದು ಅಭ್ಯಾಸ, ಪರಿಶ್ರಮಗಳಿಂದ ಬೆಳೆಸಿಕೊಂಡು ಬಂದ ಗೀತಮಾರ್ಗ. ಆ ಹಾಡುಗಾರಿಕೆಯನ್ನು ಇಂದಿಗೂ ಗುರುವಿನಿಂದ ಹೇಳಿಸಿಕೊಂಡು ಕಲಿಯಬೇಕಾಗುತ್ತದೆ. ಇಲ್ಲಿನ ತಾಳ, ಮದ್ದಳೆಗಳ ಗತ್ತುಗಳನ್ನು ಅಷ್ಟೇ ಶ್ರದ್ಧೆಯಿಂದ ಅಭ್ಯಸಿಸಬೇಕಾಗುತ್ತದೆ."[1] ಯಕ್ಷಗಾನವು ಕರಾವಳಿ ಮತ್ತು ಮಲೆನಾಡಿನ ಗದ್ದೆ ಬಯಲುಗಳಲ್ಲಿ ಹುಟ್ಟಿ ಬೆಳೆದು, ಇಂದು ಅತ್ಯಾಧುನಿಕ ರಂಗಮಂದಿರಗಳವರೆಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಹಾಗೆಯೇ ಯಕ್ಷಗಾನ ಬಯಲಾಟವಲ್ಲದೆ, ಆಧುನಿಕ ರಂಗ ತಂತ್ರಗಳು ಮತ್ತು ತಾಳಮದ್ದಳೆಯೊಂದಿಗೆ ವಿಶ್ವದಾದ್ಯಂತ ಹೆಸರು ಮಾಡಿದೆ.

ಯಕ್ಷಗಾನವನ್ನು ಸಮಗ್ರ ರಂಗಭೂಮಿ ಎಂದು ಕರೆಯಲಾಗುತ್ತದೆ. ಏಕೆಂದರೆ ಇದು ನೃತ್ಯ, ಸಂಗೀತ, ಸಾಹಿತ್ಯ, ಅಭಿನಯ ಮತ್ತು ಸಂಭಾಷಣೆಗಳ ಅಪರೂಪದ ಸಂಗಮವಾಗಿ ಮೂಡಿಬರುವಂತಹ ಕಲೆಯಾಗಿದೆ. ಕನ್ನಡ ರಂಗಭೂಮಿಯ ಪ್ರಮುಖ ಮತ್ತು ಜೀವಂತ ರೂಪಗಳಲ್ಲಿ ಯಕ್ಷಗಾನವು ಅಗ್ರಗಣ್ಯ ಸ್ಥಾನವನ್ನು ಹೊಂದಿದೆ. ರಾಮಾಯಣ, ಮಹಾಭಾರತ ಮತ್ತು ಭಾಗವತದಂತಹ ಮಹಾಕಾವ್ಯಗಳನ್ನು ರಂಗದ ಮೇಲೆ ತರುವ ಮೂಲಕ ಯಕ್ಷಗಾನ ಜನಸಾಮಾನ್ಯರಿಗೆ ರಂಗಾನುಭವ ನೀಡುವ ಮೂಲಕ ಸಂಭ್ರಮ ತರುವಂತದ್ದಾಗಿದೆ. ಯಕ್ಷಗಾನದಲ್ಲಿ ಪ್ರಸಂಗ ಸಾಹಿತ್ಯವು ಕನ್ನಡ ಕಾವ್ಯಗಳು ರಾಗ-ತಾಳಗಳ ಚೌಕಟ್ಟಿನಲ್ಲಿ ಬೆಳೆದು ಬಂದಿರುವುದು ರಂಗಭೂಮಿಯಲ್ಲಿ ನೋಡುತ್ತೇವೆ. ಯಕ್ಷಗಾನವು ಬಯಲು ರಂಗಮಂದಿರದಲ್ಲಿ ರಾತ್ರಿಯಿಂದ ಬೆಳಗಾಗುವ ವರೆಗೆ ನಡೆಯುತ್ತದೆ. ಇವು ವಿಶಿಷ್ಟವಾದ ಕಿರೀಟಗಳು, ಬಣ್ಣ ಮುಖದ ರೂಪುರೇಷೆಗಳು ಮತ್ತು ಆಕರ್ಷಕ ಆಭರಣಗಳು ರಂಗ ಪ್ರದರ್ಶನಕ್ಕೆ ಜೀವ ತುಂಬಿ ಕನ್ನಡ ರಂಗಭೂಮಿಗೆ ಜೀವ ತರುವಂತವುಗಳಾಗಿವೆ (ಜೀವ ತುಂಬುತ್ತವೆ). ಮೊದಲಿನಿಂದ ಕನ್ನಡ ರಂಗಭೂಮಿಯಲ್ಲಿ ಆಧುನಿಕ ನಾಟಕಗಳಿಗೂ ಮುನ್ನವೇ ಜನಪದ ಹಾಗೂ ಶಾಸ್ತ್ರೀಯ ರಂಗ ರೂಪಗಳನ್ನು ಯಕ್ಷಗಾನ ಕಾಯ್ದುಕೊಂಡು ಬಂದಿರುವುದನ್ನು ನೋಡುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಿ ಯಕ್ಷಗಾನವು ಸಂಸ್ಕೃತಿ ಮತ್ತು ಕಲೆಯ ಪ್ರಸಾರಕ್ಕೆ ಕನ್ನಡ ರಂಗಭೂಮಿಯೊಂದಿಗೆ ಹತ್ತಿರದ ಸಂಬಂಧ ಹೊಂದಿದೆ. ಯಕ್ಷಗಾನಕ್ಕೆ ಮುಖ್ಯವಾಗಿ ರಂಗಭೂಮಿ ಇರಲೇಬೇಕು. ಏಕೆಂದರೆ ಯಕ್ಷಗಾನವನ್ನು ಪ್ರಸ್ತುತ ಪಡಿಸುವುದಕ್ಕೆ ರಂಗಭೂಮಿಯು ಅತಿಮುಖ್ಯವಾಗಿದೆ. ಆದ್ದರಿಂದಲೇ ಯಕ್ಷಗಾನ ಮತ್ತು ಕನ್ನಡ ರಂಗಭೂಮಿಯ ಸಂಬಂಧ ಆಳವಾಗಿದೆ. ಯಕ್ಷಗಾನ ರಂಗಭೂಮಿಯ ಸ್ವರೂಪದ ಎರಡು ಮುಖ್ಯ ಅಂಶಗಳೆಂದರೆ ಪ್ರಸಂಗ ಮತ್ತು ಅದರ ಪ್ರದರ್ಶನವಾಗಿದೆ. ಯಕ್ಷಗಾನದಲ್ಲಿ ಪ್ರಸಂಗ ಎಷ್ಟು ಮುಖ್ಯವೋ, ಪ್ರದರ್ಶನವು ಅಷ್ಟೇ ಮುಖ್ಯವಾಗಿದೆ. ಪ್ರಸಂಗ ಮತ್ತು ಅದರ ಪ್ರದರ್ಶನ. ಪ್ರಸಂಗವೆಂಬುದು ಹಾಡುಗಳಿಂದ ಕೂಡಿದ ಕಥನಕಾವ್ಯವಾಗಿದೆ. ಅದರ ಪ್ರಯೋಗ ರೂಪಗಳಾದ ಆಟ, ತಾಳ ಮದ್ದಳೆ, ಗೊಂಬೆಯಾಟ ಮತ್ತು ಕೇವಲ ಗಾಯನವು ಇವುಗಳೆಲ್ಲ ಆಧಾರವೇ ಆ ಯಕ್ಷಗಾನ ಪ್ರಸಂಗವಾಗಿದೆ. ಪ್ರಸಂಗಾಧಾರಿತವಾಗಿ ರೂಪುಗೊಳ್ಳುವ ಪ್ರಯೋಗವೇ ಪ್ರದರ್ಶನವಾಗಿದೆ. ಯಕ್ಷಗಾನ ಕಲೆಯು ಇತರ ಅನೇಕ ಕಲೆಗಳಂತೆಯೇ ಮತಧರ್ಮಗಳಿಂದ ಪ್ರೇರಣೆಗೊಂಡು ವಿಕಾಸಗೊಂಡಿದೆ. ಹಾಗೆ ಈ ಒಂದು ಕಲೆಯು ಒಂದೇ ಮುಖದ ಕಲೆಯಲ್ಲ. ನಾಲ್ಕು ಮುಖವನ್ನು ಹೊಂದಿದ ಬ್ರಹ್ಮನಂತೆ, ನಾಲ್ಕು ಮುಖವನ್ನೊಳಗೊಂಡಿದೆ. ಆದ್ದರಿಂದ ಈ ಒಂದು ಕಲೆಗೆ ಸಮ್ಮಿಶ್ರ ಕಲೆ, ನೃತ್ಯ, ನಾಟಕ, ಗಾಯನ, ಚಿತ್ರ ಈ ನಾಲ್ಕು ಪ್ರಬಲ ಮಾಧ್ಯಮಗಳಿಂದ ಬೆಳೆದು ಬಂದ ಸಾಧನವಾಗಿದೆ.

'ಯಕ್ಷಗಾನ' ಎಂಬ ಪದದಲ್ಲಿಯೇ ಗಾನ ಎಂಬ ಶಬ್ದವನ್ನು ನೋಡಿದಾಗಲೇ ತಿಳಿದುಬರುವುದೇ ಗಾಯನವನ್ನೊಳಗೊಂಡ ಕಲೆಯಾಗಿದೆ. ಮಲೆನಾಡಿನ ಜನರು ಯಕ್ಷಗಾನ ಸಂಪ್ರದಾಯ ಕಲಾ ಸಂಪತ್ತನ್ನು ಉಳಿಸಿಬೆಳೆಸಿಕೊಂಡು ಬಂದಿದ್ದಾರೆ. ಯಕ್ಷಗಾನವು ಜಾನಪದ ಕಲೆ, ಜಾನಪದವಾದ ಕಲೆಗಳನ್ನು ಜನರು ಸಂಸ್ಕೃತಿ ಪರಂಪರೆಯಿಂದ ಬಂದಂತಹ ಕಲೆಯನ್ನು ಉಳಿಸಿಕೊಂಡು ಹೋಗುವುದು ಮುಖ್ಯವಾಗಿದೆ. ಉಳಿಸಿಕೊಂಡು ಬಂದಂತಹ ಕಲೆಯು ಹಿಂದಿನಿಂದಲೂ ಇಂದಿಗೂ ಕನ್ನಡ ರಂಗಭೂಮಿಯಲ್ಲಿ ಕಾಣುತ್ತೇವೆ.

ಬಯಲಾಟವೆಂಬುದು ರಾತ್ರಿಯಿಡೀ ಆಡುವ ಆಟ. ಕತ್ತಲು ಕವಿದೊಡನೆಯೇ ರಂಗಸ್ಥಳದಲ್ಲಿ ಚಂಡೆಮದ್ದಳೆಗಳ ಧ್ವನಿ ಕೇಳಿಸತೊಡಗಿದರೆ, ಗಾಳಿಗೆ ಆ ಆರ್ಭಟದ ಧ್ವನಿ ನಾಲ್ಕು ದಿಕ್ಕುಗಳಲ್ಲಿರುವ ಹಳ್ಳಿ ಜನರನ್ನು ಎಚ್ಚರಿಸುತ್ತದೆ. ಎಷ್ಟೇ ದೂರವಿರಲಿ ಧ್ವನಿ ಕೇಳಿದಾಕ್ಷಣ ಮಲಗಲು ಚಾಪೆ ಹಿಡಿದುಕೊಂಡೇ ರಂಗಸ್ಥಳಕ್ಕೆ ಆಗಮಿಸುತ್ತಾರೆ. ಆದ್ದರಿಂದ ರಂಗಭೂಮಿಗೆ ಇವತ್ತಿಗೂ ಜನ ಉನ್ನತ ಸ್ಥಾನಮಾನ ಕೊಡುತ್ತಾ ಬಂದಿದ್ದಾರೆ. ಜಾತ್ರೆ ಹಬ್ಬ ಹರಿದಿನಗಳಲ್ಲಿ ನಾಟಕ ಬಯಲಾಟದಂತಹ ಕಥೆಯಾಧಾರಿತ ನಾಟಕಗಳನ್ನು ನೋಡುವುದೇ ಜನರಿಗೆ ಸಂಭ್ರಮವಾಗಿದೆ. ತಾಳ ಮದ್ದಲೆಯ ಸೇವೆಗಾಗಿ ಉಂಬಳಿಯನ್ನು ಕೊಟ್ಟ ಕನ್ನಡದ ಶಾಸನವೂ ಕೃಷ್ಣದೇವರಾಯನ ಕಾಲದ್ದೇ."[2] ಅನೇಕ ರಾಷ್ಟ್ರ ಪ್ರಶಸ್ತಿ ಪಡೆದಂತಹ ಕವಿಗಳು ಬರೆದ ಕಾವ್ಯ ಕಥೆಗಳು ನಾಟಕಗಳಾಗಿ ರಂಗಭೂಮಿಯಲ್ಲಿ ತೆರೆಕಂಡಿವೆ. ಅತ್ಯದ್ಭುತವಾದಂತಹ ಕಥೆ ಕಾವ್ಯಗಳು ಕಾದಂಬರಿಗಳು ನಾಟಕಗಳಾಗಿ ಸಿನಿಮಾ(ಚಲನಚಿತ್ರ)ಗಳಾಗಿ ತೆರೆಕಂಡಿವೆ.

ಡಾ. ಶಿವರಾಮ ಕಾರಂತರು ಕಥೆ ಕಾದಂಬರಿಗಳನ್ನು ಬರೆದಿದ್ದಾರೆ. ಆದರೆ ಯಕ್ಷಗಾನ ಕಲೆಗೆ ಹೊಸ ರೂಪ ನೀಡಲು ಶ್ರಮಿಸಿದವರು. ಹಾಗೆಯೇ ಯಕ್ಷಗಾನ ಬಯಲಾಟದ ಬಗ್ಗೆ ಆಳವಾದ ಸಂಶೋಧನಾ ಗ್ರಂಥಗಳನ್ನು ಬರೆದಿದ್ದಾರೆ. 'ಯಕ್ಷಗಾನ ಬಯಲಾಟ' ಎಂಬ ಪ್ರಸಿದ್ಧ ಕೃತಿಯನ್ನು ರಚಿಸಿದ್ದಾರೆ. ಯಕ್ಷಗಾನ ರಂಗಭೂಮಿಗೆ ಹೊಸ ಪ್ರಯೋಗಗಳನ್ನು ತಂದಿದ್ದಾರೆ. ಕಾರಂತರವರು ನಾಡಿನಾದ್ಯಂತ ಸಂಚರಿಸಿ ಯಕ್ಷಗಾನ ತರಬೇತಿ ಹಾಗೂ ಪ್ರದರ್ಶನಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಹಾಗೆಯೇ ಡಾ. ಚಂದ್ರಶೇಖರ ಕಂಬಾರ ಅವರು ಮೂಲತಃ ಪ್ರಸಿದ್ಧ ಕವಿ, ನಾಟಕಕಾರ ಹಾಗೂ ಜಾನಪದ ತಜ್ಞರು. ಅವರು ನೇರವಾಗಿ ಸಾಂಪ್ರದಾಯಿಕ ಶೈಲಿಯ ಪ್ರತ್ಯೇಕ ಯಕ್ಷಗಾನ ಪ್ರಸಂಗಗಳನ್ನು ಅಥವಾ ಯಕ್ಷಗಾನ ಕಾವ್ಯಗಳನ್ನು ಬರೆಯದಿದ್ದರೂ, ಅವರ ಕಾವ್ಯ ಮತ್ತು ರಂಗಭೂಮಿಯ ಶೈಲಿಯು ಯಕ್ಷಗಾನ ಹಾಗೂ ಬಯಲಾಟದಂತಹ ಜಾನಪದ ನೃತ್ಯ–ನಾಟಕ ರೂಪಗಳ ಪ್ರಭಾವ ಹಾಗೂ ಲಯವನ್ನು ಆಳವಾಗಿ ಒಳಗೊಂಡಿರುವುದು ಕಂಡುಬರುತ್ತದೆ. ಉತ್ತರ ಕರ್ನಾಟಕದ ಜನಪದ ರಂಗಭೂಮಿ ಮತ್ತು ಬಯಲಾಟದ ರೂಪಗಳನ್ನು ಆಧುನಿಕ ರಂಗಭೂಮಿಗೆ ತಂದವರು. ಇವರ ಪ್ರಮುಖ ಕಾವ್ಯ ಮತ್ತು ನಾಟಕಗಳಲ್ಲಿಯೂ ಜನಪದ ದೈವಗಳು, ಪುರಾಣ ಹಾಗೂ ಸಮಕಾಲೀನ ಬದುಕಿನ ಸಾಂದರ್ಭೀಕರಣವೇ ತುಂಬಿರುತ್ತದೆ. ಇವರ 'ಜೋಕುಮಾರಸ್ವಾಮಿ', 'ಸಿರಿಸಂಪಿಗೆ' ಯಕ್ಷಗಾನದ ರಂಗಸ್ಫೂರ್ತಿಯನ್ನು ಹೊಂದಿರುವ ಪ್ರಸಿದ್ಧ ನಾಟಕಗಳು. ಹೀಗೆ ರಂಗಭೂಮಿ ಯಕ್ಷಗಾನದೊಂದಿಗೆ ಸಮ್ಮಿಲನಗೊಂಡಿದೆ. ರಾತ್ರಿಪೂರ್ತಿ ನಡೆಯುತ್ತಿದ್ದ ಬಯಲಾಟಗಳು ಕಾಲ ಕಾಲಕ್ಕೆ ತಕ್ಕಂತೆ ಬದಲಾಗಿ ಮೂರು–ನಾಲ್ಕು ಗಂಟೆಗಳ ಸಂಕ್ಷಿಪ್ತ ರಂಗ ಪ್ರಯೋಗಗಳಾಗಿ ಬದಲಾಗಿವೆ. ವೃತ್ತಿ ಮತ್ತು ಹವ್ಯಾಸಿ ಮೇಳಗಳು ಪೌರಾಣಿಕ ಕಥೆಗಳಷ್ಟೇ ಅಲ್ಲದೆ, ಜಾಗತಿಕ ಸಾಹಿತ್ಯ ಮತ್ತು ವರ್ತಮಾನದ ಸಮಸ್ಯೆಗಳನ್ನು ಯಕ್ಷಗಾನ ರಂಗಭೂಮಿಗೆ ಅಳವಡಿಸುತ್ತಾ ಬಂದಿವೆ. ಆದ್ದರಿಂದ ಯಕ್ಷಗಾನ ಮತ್ತು ಕನ್ನಡ ರಂಗಭೂಮಿ ಅವಿನಾಭಾವ ಸಂಬಂಧ ಹೊಂದಿವೆ.

**ಕೊನೆ ಟಿಪ್ಪಣಿಗಳು:**

1. ಶಿವರಾಮ ಕಾರಂತ, (1983), ಯಕ್ಷಗಾನ ಬಯಲಾಟ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಪು.ಸಂ. 108.
2. ಅದೇ, ಪು.ಸಂ. 60.